# ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ

ಸಿ.ಸಿ. ನಂ.193/2020

**ಫಿರ್ಯಾದಿದಾರರು** : ಕರ್ನಾಟಕ ಸರಕಾರ ಅಣ್ಣಿಗೇರಿ ಪಿ.ಎಸ್.

**ವಿರುದ್ಧ**

**ಆರೋಪಿತ** : 1. ಶ್ರೀ ನಿಂಗಪ್ಪ ತಂದೆ ದೇವಪ್ಪ ಬಡಿಗೇರ
ವಯಾಃ 46 ವರ್ಷ, ಉದ್ಯೋಗಃ ಚಾಲಕ,
ಸಾಃ ಬಿನ್ನಾಳ, ತಾಃ ಕುಕನೂರ, ಕೊಪ್ಪಳ.

**ಆಪಾದನೆ**

ಅಣ್ಣಿಗೇರಿ ಪೋಲೀಸ್ ಠಾಣೆಯ ಹದ್ದಿಯ ಪೈಕಿ ಗದಗ-ಹುಬ್ಬಳ್ಳಿ ರಾಷ್ಟ್ರೀಯ ಹೆದ್ದಾರಿ ಕೊಂಡಿಕೊಪ್ಪ ಗ್ರಾಮದ ಹದ್ದಿಯ ಯಲ್ಲಪ್ಪ ಸೋಮಪ್ಪ ಶೆಟ್ಟಿನಾಯ್ಕರ ರವರ ಜಮೀನಿನ ಹತ್ತಿರ ದಿನಾಂಕಃ 14.01.2020 ರಂದು ಸಾಯಂಕಾಲ 6.00 ಗಂಟೆಗೆ 1 ನೇ ಆರೋಪಿಯಾದ ನೀವು ಕೆ.ಎಸ್.ಆರ್.ಟಿ.ಸಿ. ಬಸ್ ಸಂಖ್ಯೆ ಕೆಎ-26/ಎಫ್-877 ನೇದ್ದನ್ನು ಹುಬ್ಬಳ್ಳಿ ಕಡೆಯಿಂದ ಗದಗ ಕಡೆಗೆ ಅತೀ ವೇಗ ಹಾಗೂ ಅಲಕ್ಷತನದಿಂದ ಚಲಾಯಿಸಿಕೊಂಡು ಬಂದು ನಿಮ್ಮ ಮುಂದೆ ಹೊರಟಿದ್ದ ಬೇರೆ ವಾಹನವನ್ನು ಓವರ್ ಟೇಕ್ ಮಾಡಿ ಬಸ್‌ನ್ನು ರಸ್ತೆಯ ಬಲ ಸೈಡ್‌ನಲ್ಲಿ ಚಾಲನೆ ಮಾಡಿಕೊಂಡು ಬಂದು ಗದಗ ಕಡೆಯಿಂದ ಅಣ್ಣಿಗೇರಿ ಕಡೆಗೆ ತನ್ನ ಎಡಸೈಡ್‌ನಲ್ಲಿ ಚಾಲನೆ ಮಾಡಿಕೊಂಡು ಬರುತ್ತಿದ್ದ ಶಿವರಾಜಕುಮಾರ ಯಲ್ಲಪ್ಪ ಕಾಳೆ ರವರ ಮೋಟಾರ್ ಸೈಕಲ್ ಸಂಖ್ಯೆ ಕೆಎ-61/ಎಚ್-8798 ನೇದ್ದಕ್ಕೆ ಬಸ್‌ನ್ನು ಡಿಕ್ಕಿ ಮಾಡಿ ಅಪಘಾತ ಪಡಿಸಿ ಮೋಟಾರ್ ಸೈಕಲ್ ಚಾಲಕ ಶಿವರಾಜಕುಮಾರ ಯಲ್ಲಪ್ಪ ಕಾಳೆ ರವರಿಗೆ ಮಾರಣಾಂತಿಕ ಗಾಯ ಪಡಿಸಿ ಮರಣ ಪಡಿಸಿದ್ದು ಅಲ್ಲದೇ ಸದರಿ ಅಪಘಾತದಲ್ಲಿ ಸದರಿ ದ್ವಿಚಕ್ರ ವಾಹನದ ಹಿಂಬದಿ ಸವಾರರಾದ ಶ್ರೀ ಅಶೋಕ ತಂದೆ ರಾಜು ಚಲವಾದಿರವರಿಗೆ ಮತ್ತು ಶ್ರೀ ದುರ್ಗಪ್ಪ ಶಿವಪ್ಪ ಅಬ್ಬಿಗೇರಿರವರಿಗೆ ಭಾರೀ ಗಾಯ ಪಡಿಸಿ ಮರಣ ಹೊಂದುವಂತೆ ಮಾಡಿದ್ದು, ಆ ಮೂಲಕ 1 ನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ.279 ಮತ್ತು 304 ಎ ನೇದ್ದರ

ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಅಧಿಕಾರದ ವ್ಯಾಪ್ತಿಯಲ್ಲಿ ಎಸಗಿರುವುದಾಗಿ ಆರೋಪಿಸುತ್ತೇನೆ.

**ಪ್ರಶ್ನೆ.1:** ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ ?

**ಉತ್ತರಃ**

**ಪ್ರಶ್ನೆ.2:** ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ ?

**ಉತ್ತರಃ**

(ಮೇಲಿನ ಆಪಾದನೆಯನ್ನು 1 ನೇ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ ಉತ್ತರ ಪಡೆದು ಬಹಿರಂಗ ನ್ಯಾಯಾಲಯದಲ್ಲಿ ನಮೂದು ಮಾಡಲಾಯಿತು )

ಸ್ಥಳಃ ನವಲಗುಂದ **(ಮಂಜುನಾಥ ಡಿ.ಆರ್.)**

ದಿನಾಂಕಃ 17.11.2023 C/c.ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,

ನವಲಗುಂದ.

# ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ

ಸಿ.ಸಿ. ನಂ.193/2020

**ಫಿರ್ಯಾದಿದಾರರು** : ಕರ್ನಾಟಕ ಸರಕಾರ ಅಣ್ಣಿಗೇರಿ ಪಿ.ಎಸ್.

## ವಿರುದ್ಧ

**ಆರೋಪಿತ** : 2. ಶ್ರೀ ಯುಸೂಫಖಾನ್ ಮೋದಿನಖಾನ ಶಿವಳ್ಳಿ
ವಯಾಃ 30 ವರ್ಷ, ಉದ್ಯೋಗಃ ಕೂಲಿ,
ಸಾಃ ಆನಂದ ನಗರ, ಹಳೇ ಹುಬ್ಬಳ್ಳಿ

## ಆಪಾದನೆ

ಅಣ್ಣಿಗೇರಿ ಪೋಲೀಸ್ ಠಾಣೆಯ ಹದ್ದಿಯ ಪೈಕಿ ಗದಗ-ಹುಬ್ಬಳ್ಳಿ ರಾಷ್ಟ್ರೀಯ ಹೆದ್ದಾರಿ ಕೊಂಡಿಕೊಪ್ಪ ಗ್ರಾಮದ ಹದ್ದಿಯ ಯಲ್ಲಪ್ಪ ಸೋಮಪ್ಪ ಶೆಟ್ಟನಾಯ್ಕರ ರವರ ಜಮೀನಿನ ಹತ್ತಿರ ದಿನಾಂಕಃ 14.01.2020 ರಂದು ಸಾಯಂಕಾಲ 6.00 ಗಂಟೆಗೆ 2 ನೇ ಆರೋಪಿಯಾದ ನೀವು ಯಾವುದೇ ಚಾಲನಾ ಪರವಾನಗಿ ಇಲ್ಲದ ಶ್ರೀ ಶಿವರಾಜಕುಮಾರ ಯಲ್ಲಪ್ಪ ಕಾಳೆರವರಿಗೆ ಯಾವುದೇ ವಿಮೆ ಮಾಡಿಸದ ನಿಮ್ಮ ಮೋಟಾರ್ ಸೈಕಲ್ ಸಂಖ್ಯೆಃ ಕೆಎ-61/ಎಚ್-8798 ನೇದ್ದನ್ನು ಚಾಲನೆ ಮಾಡಿಲು ಕೊಟ್ಟಿದ್ದು ಆ ಮೂಲಕ 2 ನೇ ಆರೋಪಿಯಾದ ನೀವು ಮೋಟಾರ್ ವಾಹನ ಕಾಯ್ದೆ ಕಲಂ.5 ಸಹ ಕಲಂ.180 ಹಾಗೂ 196 ನೇದ್ದರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಅಧಿಕಾರದ ವ್ಯಾಪ್ತಿಯಲ್ಲಿ ಎಸಗಿರುವುದಾಗಿ ಆರೋಪಿಸುತ್ತೇನೆ.

**ಪ್ರಶ್ನೆ.1:** ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ ?

**ಉತ್ತರಃ**

**ಪ್ರಶ್ನೆ.2:** ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ ?

**ಉತ್ತರಃ**

(ಮೇಲಿನ ಆಪಾದನೆಯನ್ನು 2 ನೇ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ ಉತ್ತರ ಪಡೆದು ಬಹಿರಂಗ ನ್ಯಾಯಾಲಯದಲ್ಲಿ ನಮೂದು ಮಾಡಲಾಯಿತು )

ಸ್ಥಳಃ ನವಲಗುಂದ

ದಿನಾಂಕಃ 17.11.2023

**(ಮಂಜುನಾಥ ಡಿ.ಆರ್.)**
C/c.ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,
ನವಲಗುಂದ.